**ನಬಾರ್ಡ್ ವರದಿ** 2017ರಲ್ಲಿ 48% ಇದ್ದ ಅವಲಂಬಿತರು 2023ರಲ್ಲಿ 57%

# ದೇಶದಲ್ಲಿ ಕೃಷಿ ಅವಲಂಬಿತರು ಹೆಚ್ಚಳ, ಕರ್ನಾಟಕದಲ್ಲಿ ಇಳಿಕೆ

## ಕನ್ನಡಿಗ ಕೃಷಿ ಅವಲಂಬಿತರು 59%ನಿಂದ 57%ಗೆ ಕುಸಿತ

**ನವದೆಹಲಿ:** ಜನತೆ ಕೃಷಿ ಚಟುವಟಿಕೆಯಿಂದ ದೂರ ಸರಿಯುತ್ತಿದ್ದಾರೆ. ಕೃಷಿ ಚಟುವಟಿಕೆ ಕಡಿಮೆಯಾಗುತ್ತಿದೆ ಎಂಬ ಆತಂಕಗಳ ನಡುವೆಯೇ, ಕಳೆದ ಕೆಲ ವರ್ಷಗಳಿಂದ ಭಾರತದ ಗ್ರಾಮೀಣ ಮತ್ತು ಅರೆ ನಗರಪ್ರದೇಶಗಳ ಜನತೆ ಕೃಷಿ ಚಟುವಟಿಕೆ ಮೇಲೆ ಅವಲಂಬಿತರಾಗುವ ಪ್ರಮಾಣ ಹೆಚ್ಚುತ್ತಿದೆ ಎಂದು ಕೇಂದ್ರ ಸರ್ಕಾರದ ವರದಿಯೊಂದು ಹೇಳಿದೆ. ಅದಕ್ಕೆ ವ್ಯತಿರಿಕ್ತವಾಗಿ ಕರ್ನಾಟಕದಲ್ಲಿ ಕೃಷಿ ಅವಲಂಬಿತರ ಪ್ರಮಾಣ ಕುಸಿದಿದೆ. ರಾಷ್ಟ್ರೀಯ ಕೃಷಿ ಬ್ಯಾಂಕ್ ಮತ್ತು ಗ್ರಾಮೀಣ ಅಭಿವೃದ್ಧಿ (ನಬಾರ್ಡ್) ಬಿಡುಗಡೆ ಮಾಡಿರುವ ಗ್ರಾಮೀಣ ಹಣಕಾಸು ಒಳಗೊಳ್ಳುವಿಕೆ ಸಮೀಕ್ಷೆ ವರದಿಯಲ್ಲಿ, 2016-17ರ ಅಂಕಿಅಂಶಕ್ಕೆ ಹೋಲಿಸಿದರೆ ದೇಶದಲ್ಲಿ 2021-22ರಲ್ಲಿ ಕೃಷಿಯಲ್ಲಿ ತೊಡಗಿಕೊಂಡಿರುವವರ ಪ್ರಮಾಣ ಹೆಚ್ಚಾಗಿದೆ ಎಂದಿದೆ. ↘ 8



| ಎಲ್ಲೆಲ್ಲಿ ಏರಿಕೆ? | |
|---|---|
| ಜಾರ್ಖಂಡ್ | ಶೇ.51ರಿಂದ ಶೇ.69ಕ್ಕೆ |
| ಅಸ್ಸಾಂ | ಶೇ.47ರಿಂದ ಶೇ.67ಕ್ಕೆ |
| ಉತ್ತರಾಖಂಡ | ಶೇ.41ರಿಂದ ಶೇ.57ಕ್ಕೆ |
| ತಮಿಳುನಾಡು | ಶೇ.13ರಿಂದ ಶೇ.57ಕ್ಕೆ |
| ಹರ್ಯಾಣ | ಶೇ.34ರಿಂದ ಶೇ.58ಕ್ಕೆ |
| ಮಹಾರಾಷ್ಟ್ರ | ಶೇ.36ರಿಂದ ಶೇ.59ಕ್ಕೆ |
| ಆಂಧ್ರಪ್ರದೇಶ | ಶೇ.34ರಿಂದ ಶೇ.53ಕ್ಕೆ |
| ಪಶ್ಚಿಮ ಬಂಗಾಳ | ಶೇ.35ರಿಂದ ಶೇ.49ಕ್ಕೆ |



22-10-2024
Kannadaprabha Pg 01

# ದೇಶದಲ್ಲಿ ಕೃಷಿ ಅವಲಂಬಿತರು ಹೆಚ್ಚಳ, ಕರ್ನಾಟಕದಲ್ಲಿ ಇಳಿಕೆ

↙ ಮೊದಲ ಪುಟದಿಂದ

**ವರದಿ ಹೇಳಿದ್ದೇನು?:** ಕೃಷಿಯೇ ಮುಖ್ಯ ಕಸುಬಾಗಿದ್ದ ಭಾರತದಲ್ಲಿ ಕ್ರಮೇಣ ಕೃಷಿ ಕ್ಷೇತ್ರ ಕಳೆಗುಂದಲು ಆರಂಭವಾಗಿತ್ತು. ಆದರೆ ಜನರು ಮತ್ತೆ ಕೃಷಿಯತ್ತ ಮನಸ್ಸು ಮಾಡಿದ್ದಾರೆ. 2016-17ರಲ್ಲಿ ಗ್ರಾಮೀಣ ಪ್ರದೇಶಗಳು ಮತ್ತು 50000ಕ್ಕಿಂತ ಕಡಿಮೆ ಜನಸಂಖ್ಯೆ ಅರೆ ನಗರಗಳ ಶೇ.48ರಷ್ಟು ಜನರು ಕೃಷಿಕರಾಗಿದ್ದರೆ, 2021-22ರಲ್ಲಿ ಈ ಪ್ರಮಾಣ ಶೇ.57ಕ್ಕೆ ಏರಿದೆ. ಇನ್ನು 2018-19ರಲ್ಲಿ ಗ್ರಾಮೀಣ ಭಾಗದ ಶೇ.57.8ರಷ್ಟು ಜನರಿಗೆ ಕೃಷಿ ವಲಯ ಉದ್ಯೋಗ ನೀಡಿದ್ದರೆ, 2023-24ರಲ್ಲಿ ಅದು ಶೇ.59.8ಕ್ಕೆ ಏರಿದೆ.

ಇನ್ನು 2016-17ರಲ್ಲಿ ಕೃಷಿ ಕುಟುಂಬಗಳ ಸರಾಸರಿ ಮಾಸಿಕ ಆದಾಯ 8931 ರು.ನಷ್ಟಿತ್ತು. ಆದರೆ 2021-22ರಲ್ಲಿ ಈ ಪ್ರಮಾಣ 13,661ಕ್ಕೇ ಏರಿಕೆಯಾಗಿದೆ. ಲಾಕ್‌ಡೌನ್ ಕೃಷಿ ಕ್ಷೇತ್ರದ ಮೇಲೆ ಹೆಚ್ಚಿನ ಪರಿಣಾಮ ಬೀರಿದೆ.

**ಕೆಲ ರಾಜ್ಯಗಳಲ್ಲಿ ಕುಂಠಿತ:** ಜಮ್ಮು ಕಾಶ್ಮೀರ (ಶೇ.77ರಿಂದ 73ಕ್ಕೆ) ಇಳಿದಿದೆ. ಹಿಮಾಚಲ (ಶೇ.70ರಿಂದ 63ಕ್ಕೆ), ಕರ್ನಾಟಕ (ಶೇ.59ರಿಂದ 55ಕ್ಕೆ) ಗುಜರಾತ್ (ಶೇ.59ರಿಂದ 55ಕ್ಕೆ), ಗುಜರಾತ್(ಶೇ.58ರಿಂದ ಶೇ.54ಕ್ಕೆ), ಪಂಜಾಬ್(ಶೇ.42ರಿಂದ ಶೇ.36ಕ್ಕೆ) ಇಳಿಕೆಯಾಗಿದೆ.

**ಮಾನದಂಡಗಳೇನು?:** ನಬಾರ್ಡ್ ಕೆಲ ಮಾನದಂಡಗಳನ್ನು ಇಟ್ಟುಕೊಂಡು ಈ ವರದಿಯನ್ನು ಸಿದ್ಧಪಡಿಸಿದೆ. ಅದರಲ್ಲಿ ಮುಖ್ಯವಾಗಿ, ಕೃಷಿ ಮೂಲಗಳಿಂದ ಮಾಸಿಕ 6,5000 ರು.ಗಿಂತ ಹೆಚ್ಚು ಆದಾಯ ಇದೆ ಎಂದವರು, ಕುಟುಂಬದಲ್ಲಿ ಕನಿಷ್ಠ ಒಬ್ಬರಾದರೂ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರನ್ನು ಕೃಷಿ ಅವಲಂಬಿತರು ಎಂದಿದೆ.

22-10-2024
Hosadiganta Pg 06

# ಭಾರತದ ಕಾಫಿಗೆ ಶುಕ್ರದೆಸೆ

## ಹವಾಮಾನ ವೈಪರೀತ್ಯದಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತಲ್ಲಣ

**ಮಡಿಕೇರಿ:** ದಕ್ಷಿಣ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕಾದಂತಹ ಕಾಫಿ ಬೆಳೆಯುವ ರಾಷ್ಟ್ರಗಳಲ್ಲಿ ಅಕಾಲಿಕ ಮಳೆ, ಕಾಡ್ಗಿಚ್ಚು ಮತ್ತು ಅನಾವೃಷ್ಟಿಯಂತಹ ಹವಾಮಾನ ವೈಪರೀತ್ಯದ ಪರಿಣಾಮ ಕಾಫಿ ಬೆಲೆಯಲ್ಲಿ ಏರಿಕೆಯಾಗುತ್ತಿದ್ದು, ಇದು ಮುಂದಿನ ದಿನಗಳಲ್ಲೂ ಮುಂದುವರಿಯುವ ಸಾಧ್ಯತೆಗಳಿವೆ.

ಕಾಫಿ ಉದ್ಯಮದ ತಜ್ಞರ ಪ್ರಕಾರ ಕಾಫಿ ಬೆಳೆಯುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿನ ಹವಾಮಾನ ವೈಪರೀತ್ಯಗಳು ಭಾರತೀಯ ಕಾಫಿ ಬೆಳೆಗಾರರಿಗೆ ಲಾಭದಾಯಕವಾಗಲಿದೆ ಎಂದು ಹೇಳಲಾಗುತ್ತಿದೆ. ಈ ನಡುವೆ ಭಾರತದಲ್ಲೂ ಆಂತರಿಕ ಕಾಫಿ ಬಳಕೆ ಹೆಚ್ಚುತ್ತಿದ್ದು, ಇದು ಕೊಡಗು ಸೇರಿದಂತೆ ದೇಶದ ಕಾಫಿ ಬೆಳೆಯುವ ಇತರ ಭಾಗಗಳ ಕಾಫಿ ಬೆಳೆಗಾರರಿಗೆ ಅನುಕೂಲಕರ ಮಾರುಕಟ್ಟೆಯನ್ನು ಸೃಷ್ಟಿಸಲಿದೆ ಎಂಬ ವಿಶ್ವಾಸ ಮೂಡಿಸಿದೆ.

ಕಳೆದ ವರ್ಷದಿಂದ ಹೆಚ್ಚುತ್ತಿರುವ ಕಾಫಿ ಬೇಡಿಕೆಯಿಂದಾಗಿ ಸ್ಥಳೀಯ ಮಾರುಕಟ್ಟೆಗಳು ಅಭಿವೃದ್ಧಿ ಹೊಂದುತ್ತಿದ್ದು, ಹೆಚ್ಚಿನ ರೈತರು ತಮ್ಮ ದಾಸ್ತಾನು ಮಾರಾಟ ಮಾಡಿ ಹೆಚ್ಚಿನ ಲಾಭ ಗಳಿಸುತ್ತಿದ್ದಾರೆ. ಅವರು ಇನ್ನು ಮುಂದೆ ವ್ಯಾಪಾರಿಗಳಿಗಾಗಿ ಕಾಯುವ ಅಗತ್ಯವಿಲ್ಲ ಅಥವಾ ಮಾರಾಟವಾಗದ ದಾಸ್ತಾನಿನ ಬಗ್ಗೆ ಚಿಂತಿಸಬೇಕಾಗಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಭವಿಷ್ಯದಲ್ಲೂ ಕಾಫಿಯ ಬೆಲೆ ಏರಿಕೆ ಮುಂದುವರಿಯುವ ನಿರೀಕ್ಷೆಯಿದೆ. ಆದಾಗ್ಯೂ, ಈ ಪ್ರವೃತ್ತಿ ಶೀಘ್ರದಲ್ಲೇ ಉತ್ತುಂಗಕ್ಕೇರಬಹುದು. ಮುಂದಿನ ಎರಡು ವರ್ಷಗಳಲ್ಲಿ ಬೆಲೆಗಳು ಮತ್ತಷ್ಟು ಏರಿಕೆ ಯಾಗುವುದರೊಂದಿಗೆ, ಒಂದು ನಿರ್ದಿಷ್ಟ ಮಿತಿಯನ್ನು ಮೀರಿದರೆ, ಸಂಪೂರ್ಣ ಮೌಲ್ಯ ಸರಪಳಿ ಗ್ರಾಹಕರ ಕೈಗೆಟುಕದ ಹಂತಕ್ಕೆ ತಲುಪ ಬಹುದೆಂದು ಹೇಳಲಾಗುತ್ತಿದೆ.

ಪ್ರಸಕ್ತ ಸಾಲಿನಲ್ಲಿ (2024 ರಲ್ಲಿ) ಕಾಫಿ ಬೆಲೆಯು ಅದರಲ್ಲೂ ವಿಶೇಷವಾಗಿ ಅರೇಬಿಕಾ ಕಾಫಿಯ ಪೂರೈಕೆ ಅಡೆತಡೆಗಳಿಂದಾಗಿ 13 ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಈ ವರ್ಷ ಬೆಲೆಗಳು ಸರಿ ಸುಮಾರು ಶೇ.40 ರಷ್ಟು ಏರಿಕೆಯಾಗಿದೆ. ಏಕೆಂದರೆ ಹೆಚ್ಚು ಕೈಗೆಟುಕುವ ಕಾಫಿ ಬೀಜವಾದ ರೋಬಸ್ಟಾದ ಕೊರತೆಯು ಪ್ರೀಮಿಯಂ ಅರೇಬಿಕಾ ಪ್ರಭೇದಕ್ಕೆ ಬೇಡಿಕೆಯನ್ನು ಹೆಚ್ಚಿಸಿದೆ.

ಜಾಗತಿಕ ಕಾಫಿ ಮಾರುಕಟ್ಟೆಯಲ್ಲಿ ಭಾರತವು ಗಮನಾರ್ಹ ಪಾಲುದಾರ ದೇಶವಾಗಿದ್ದು, ಕಾಫಿಯ ಎರಡು ಪ್ರಾಥಮಿಕ ಪ್ರಭೇದಗಳಾದ ಅರೇಬಿಕಾ ಮತ್ತು ರೋಬಸ್ಟಾವನ್ನು ಬೆಳೆಯಲಾಗುತ್ತಿದೆ.

ಅರೇಬಿಕಾ ಕಾಫಿಯು ಅದರ ಸೌಮ್ಯವಾದ ಆರೊಮ್ಯಾಟಿಕ್ ಸುವಾಸನೆಗೆ ಹೆಸರುವಾಸಿಯಾಗಿದೆ. ಈ ಕಾಫಿಗೆ ರೋಬಸ್ಟಾಕ್ಕಿಂತ ಹೆಚ್ಚು ಬೇಡಿಕೆಯಿದೆ. ಭಾರತದ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ, ಭಾರತದ ಕಾಫಿ ಉತ್ಪಾದನೆಯ ಸುಮಾರು ಶೇ.70ರಷ್ಟನ್ನು ರಫ್ತು ಮಾಡಲಾಗುತ್ತದೆ. ಕಾಫಿ ರಫ್ತಿನಲ್ಲಿ ದೇಶವು ಜಾಗತಿಕವಾಗಿ ಐದನೇ ಸ್ಥಾನದಲ್ಲಿದೆ, ಇದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರಮುಖ ಪಾಲುದಾರ ದೇಶವಾಗಿದೆ. ಭಾರತ ದಲ್ಲಿ ಕಾಫಿ ಉತ್ಪಾದನೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ದೇಶದ ಒಟ್ಟು ಉತ್ಪಾದನೆಯ ಶೇ.71 ರಷ್ಟನ್ನು ಕರ್ನಾಟಕದಲ್ಲಿ ಬೆಳೆಯಲಾಗುತ್ತಿದೆ. ಪ್ರಾಥಮಿಕವಾಗಿ ರೋಬಸ್ಟಾವನ್ನು ಬೆಳೆಯಲಾಗುತ್ತಿದ್ದು, ಉಳಿದ ಉತ್ಪಾದನೆಯು ಕೇರಳ, ತಮಿಳುನಾಡು ಮತ್ತು ಈಶಾನ್ಯ ರಾಜ್ಯಗಳಿಂದ ಬರುತ್ತದೆ.

ಕಳೆದ 2023-24 ಋತುವಿನಲ್ಲಿ ಭಾರತವು 3,74,200 ಮೆಟ್ರಿಕ್ ಟನ್ ಕಾಫಿಯನ್ನು ಉತ್ಪಾದಿಸಿದ್ದರೆ, ಈ ಪೈಕಿ ಕರ್ನಾಟಕವು 2,66,885 ಮೆಟ್ರಿಕ್ ಟನ್ ಕಾಫಿಯನ್ನು ಕೊಡುಗೆಯಾಗಿ ನೀಡಿದೆ.



### ಭಾರತೀಯ ಫಿಲ್ಟರ್ ಕಾಫಿಗೆ ದ್ವಿತೀಯ ಸ್ಥಾನ

ಈ ವಾರ ಬಿಡುಗಡೆಯಾದ ಟೇಸ್ಟ್ ಅಟ್ಲಾಸ್‌ನ ವಿಶ್ವದ ಅತ್ಯುತ್ತಮ ಕಾಫಿ ಪಾನೀಯಗಳ ಪಟ್ಟಿಯಲ್ಲಿ ಭಾರತ ಫಿಲ್ಟರ್ ಕಾಫಿ ಎರಡನೇ ಸ್ಥಾನ ಪಡೆದುಕೊಂಡಿದೆ. ಭಾರತೀಯ ಫಿಲ್ಟರ್ ಕಾಫಿಯು ಅದರ ಶ್ರೀಮಂತ ಪರಿಮಳ ಮತ್ತು ರುಚಿಯೊಂದಿಗೆ, ಅಂತಾರಾಷ್ಟ್ರೀಯ ಮನ್ನಣೆಯನ್ನು ಗಳಿಸಿದ್ದು, ಟೇಸ್ಟ್ ಅಟ್ಲಾಸ್ ಅನ್ವಯ ಕ್ಯೂಬಾದ ಕೆಫೆ ಕ್ಯೂಬಾನೊ ಅಗ್ರ ಸ್ಥಾನನ್ನು ಪಡೆದಿದ್ದರೆ, ಗ್ರೀಸ್‌ನ ಎಸ್ಪ್ರೆಸೊ ಫ್ರೆಡ್ಡೊ ಮೂರನೇ ಸ್ಥಾನದಲ್ಲಿದೆ ಎನ್ನಲಾಗಿದೆ. ಟೇಸ್ಟ್ ಅಟ್ಲಾಸ್ ವಿಯೆಟ್ನಾಮೀಸ್ ಐಸ್ಡ್ ಕಾಫಿ, ಗ್ರೀಸ್‌ನಿಂದ ಫ್ರಾಪ್ಪೆ ಮತ್ತು ಜರ್ಮನಿಯ ಐಸ್ ಕಾಫಿ ಸೇರಿದಂತೆ ಇತರ ಗಮನಾರ್ಹ ಕಾಫಿಗಳನ್ನು ಸಹ ಪಟ್ಟಿ ಮಾಡಿದೆ. ಈ ವೈವಿಧ್ಯಮಯ ಪಟ್ಟಿಯು ಪ್ರಪಂಚದಾದ್ಯಂತದ ಕಾಫಿ ಸಂಸ್ಕೃತಿಗಳು ಹೇಗೆ ವಿಶಿಷ್ಟವಾದ ಬ್ರೂಯಿಂಗ್ ವಿಧಾನಗಳನ್ನು ಅಭಿವೃದ್ಧಿಪಡಿಸಿವೆ ಎಂಬುದನ್ನು ತೋರಿಸುತ್ತದೆ. ದಕ್ಷಿಣ ಭಾರತದ ಫಿಲ್ಟರ್ ಕಾಫಿ ಈಗ ವಿಶ್ವದ ಅಗ್ರ ಪಾನೀಯಗಳಲ್ಲಿ ಸ್ಥಾನ ಪಡೆದುಕೊಂಡಿದೆ.

# ನೈಸರ್ಗಿಕ ಕೃಷಿ ಉತ್ಸವ ನೋಂದಣಿಗೆ ಅವಕಾಶ

**ಬೆಂಗಳೂರು:** ಬಯೋಡೈನಾಮಿಕ್ ಅಸೋಸಿಯೇಷನ್ ಆಫ್ ಇಂಡಿಯಾ ಮತ್ತು ಬಯೋಡೈನಾಮಿಕ್ ಫೆಡರೇಷನ್ ಡೆಮೆಟರ್ ಇಂಟರ್‌ನ್ಯಾಷನಲ್ ಜಂಟಿಯಾಗಿ ಹಮ್ಮಿಕೊಂಡಿರುವ 'ನೈಸರ್ಗಿಕ ಕೃಷಿ ಉತ್ಸವ'ವು ನಗರದಲ್ಲಿ ನಡೆಯಲಿದ್ದು ಉತ್ಸವದಲ್ಲಿ ಪಾಲ್ಗೊಳ್ಳಲು ಹೆಸರು ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.

ಉತ್ಸವವು ನೈಸರ್ಗಿಕ ಕೃಷಿ, ತೋಟಗಾರಿಕೆ ಹಾಗೂ ಜೈವಿಕ ಉತ್ಪಾದನಾ ವಿಧಾನಗಳ ಬಗ್ಗೆ ತಜ್ಞರ ಜ್ಞಾನ ಮತ್ತು ಅನುಭವವನ್ನು ಹಂಚಿಕೊಳ್ಳಲು ಉತ್ತಮ ವೇದಿಕೆಯಾಗಿದ್ದು ರೈತರು, ಕೃಷಿ ತಜ್ಞರು ಹಾಗೂ ಪರಿಸರ ಪ್ರೇಮಿಗಳಿಗೆ ಅನುಕೂಲವಾಗಲಿದೆ.

ಉತ್ಸವದಲ್ಲಿ ನೈಸರ್ಗಿಕ ಕೃಷಿ ತಂತ್ರಜ್ಞಾನಗಳ ಬಗ್ಗೆ ಮಾಹಿತಿ, ತಜ್ಞರಿಂದ ಉಪನ್ಯಾಸ ಹಾಗೂ ಕಾರ್ಯಾಗಾರಗಳು, ಪರಿಸರ ಸ್ನೇಹಿ ಕೃಷಿ ಉತ್ಪನ್ನಗಳ ಪ್ರದರ್ಶನ, ಸ್ಥಳೀಯ ಕೃಷಿ ಮತ್ತು ತಂತ್ರಜ್ಞಾನ ವೀಕ್ಷಣಾ ಪ್ರವಾಸವಿರಲಿದೆ. ಆಸಕ್ತರು ಹೆಸರನ್ನು ನೋಂದಾಯಿಸಲು ಮತ್ತು ಹೆಚ್ಚಿನ ಮಾಹಿತಿಗೆ events.biodynamics.inಗೆ ಭೇಟಿ ನೀಡಲು ಪ್ರಕಟಣೆ ಕೋರಿದೆ.

22-10-2024
S-karnataka Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

